/



ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾ.ಕ.ಗು/01/2016-17. ದಿನಾಂಕ:12-04-2016.

| ಅರ್ಜಿದಾರರು | ತಕರಾರುದಾರರು |
|---|---|
| 1)ಪತ್ರೆಮ್ಮ ತಂದೆ ಲೇಟ್ ಮಹಾದೇವಪ್ಪ<br>2)ಬಿ.ಬಸವರಾಜ ತಂದೆ ಲೇಟ್ ಮಹಾದೇವಪ್ಪ<br>3)ನಾಗರಾಜ ತಂದೆ ಲೇಟ್ ಮಹಾದೇವಪ್ಪ<br>4)ಮಂಜಮ್ಮ ತಂದೆ ಲೇಟ್ ಮಹಾದೇವಪ್ಪ<br>5)ಲಲಿತಮ್ಮ ತಂದೆ ಲೇಟ್ ಮಹಾದೇವಪ್ಪ<br>6)ಚಂದ್ರಮ್ಮ ತಂದೆ ಲೇಟ್ ಮಹಾದೇವಪ್ಪ<br>ಚಂದ್ರಶೇಖರಪುರ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 313ಡಿ. 452ಎ/3. 452ಬಿ. 453ಎ/3. 453ಸಿ. 454ಎ. 454ಡಿ. 475ಬಿ. ವಿಸ್ತೀರ್ಣ 0-23. 0-63. 0-05. 1-90. 0-15. 0-07. 0-05. 1-68. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 313ಡಿ. 452ಎ/3. 452ಬಿ. 453ಎ/3. 453ಸಿ. 545ಎ. 454ಡಿ. 475ಬಿ. ವಿಸ್ತೀರ್ಣ 0-23. 0-63. 0-05. 1-90. 0-15. 0-07. 0-05. 1-68. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಚಂದ್ರಶೇಖರಪುರ ಗ್ರಾಮದ ಬಿ.ಬಸವರಾಜ ತಂದೆ ಲೇಟ್ ಬಿ.ಮಹಾದೇವಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ರಾಮದುರ್ಗ ಇವರು ನಮೂನೆ-21 ರ ನೋಟಿಸನ್ನು ದಿನಾಂಕ:-18-12-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಚೆಕ್‌ಲಿಸ್ಟ್‌ನಲ್ಲಿ ತಪ್ಪು ನಮೂದಾಗಿರುವ ಕಾರಣ ಈ ಪ್ರಕರಣವನ್ನು ಎಂ.ಆರ್. ನಂಬರ್: 20/2015-16. ದಿನಾಂಕ:-20-01-2016 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ: 12-04-2016 ರಂದು ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ರಾಮದುರ್ಗ ಗ್ರಾಮದ ಸನಂ 313ಡಿ. 452ಎ/3. 452ಬಿ. 453ಎ/3. 453ಸಿ. 545ಎ. 454ಡಿ. 475ಬಿ. ವಿಸ್ತೀರ್ಣ 0-23. 0-63. 0-05. 1-90. 0-15. 0-07. 0-05. 1-68. ಎಕ್ರೆ ಜಮೀನುಗಳು ನಮ್ಮ ತಾಯಿಯವರಾದ ಹಾಲಮ್ಮ ಗಂಡ ಲೇಟ್ ಮಹಾದೇವಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 12-10-2010 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಸದರಿ ಜಮೀನುಗಳು ಚೆಕ್‌ಲಿಸ್ಟ್‌ನಲ್ಲಿ ತಪ್ಪು ನಮೂದಾಗಿರುವ ಕಾರಣ ಹಾಗೂ ಈ ಬಗ್ಗೆ ಕಂದಾಯ ಪರಿವೀಕ್ಷಕರು ಗುಡೇಕೋಟೆ ಇವರು ಗ್ರಾಮದಲ್ಲಿ ಮರು ಪರಿಶೀಲಿನೆ ಮಾಡಿ ಯಥಾಸ್ಥಿತಿಯಂತೆ ಮುಂದುವರೆಸಲು ವರದಿ ಸಲ್ಲಿಸಿರುತ್ತಾರೆ. ಸದರಿಯವರ ವರದಿ ಆಧಾರದ ಮೇಲೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**–:ಆದೇಶ:–**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 313ಡಿ. 452ಎ/3. 452ಬಿ. 453ಎ/3. 453ಸಿ. 545ಎ. 454ಡಿ. 475ಬಿ. ವಿಸ್ತೀರ್ಣ 0–23. 0–63. 0–05. 1–90. 0–15. 0–07. 0–05. 1–68. ಎಕ್ರೆ ಜಮೀನುಗಳ ಚೆಕ್‌ಲಿಸ್ಟ್ ತಪ್ಪು ನಮೂದಾಗಿರುವ ಕಾರಣ ಯತಾಸ್ಥಿತಿಯಂತೆ ಮುಂದುವರಿಸಲು ಆದೇಶಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 12–04–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ
ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಬಿ.ಬಸವರಾಜ ತಂದೆ ಲೇಟ್ ಮಹಾದೇವಪ್ಪ ಹಾಗೂ ಇತರರು ಚಂದ್ರಶೇಖರಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಗುಡೇಕೋಟೆ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.